## 113. ಭೂ ಸುಧಾರಣಾ ಕಾಯ್ದೆಯ ಸರ್ಕಾರಿ ಮಾರ್ಗಸೂಚಿ ಪ್ರಕಟ

ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961ರ ಕಲಂ 109(1)(ಐ)ಗೆ ತಿದ್ದುಪಡಿ ತಂದಿರುವ ಸರ್ಕಾರ, ಭೂಮಿ ನೀಡಿಕೆ ಬಗ್ಗೆ ಮಾರ್ಗಸೂಚಿ ಹೊರಡಿಸಿದೆ. ಕೈಗಾರಿಕೋದ್ಯಮಿಗಳು ರೈತರಿಂದ ನೇರವಾಗಿ ಭೂಮಿ ಹಕ್ಕು ಪಡೆದುಕೊಳ್ಳಲು ಬರುವುದಿಲ್ಲ.

ಕರ್ನಾಟಕ ಉದ್ಯೋಗ ಮಿತ್ರ ವೆಬ್ ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು ಕಡ್ಡಾಯ. ಎಸ್.ಎಲ್.ಎಸ್. ಡಬ್ಲ್ಯೂಸಿಸಿ/ಎಸ್‌ಎಚ್‌ಎಲ್‌ಸಿಸಿ ಅನುಮೋದನೆಗೊಂಡ ಪ್ರಸ್ತಾವನೆಗಳಿಗೆ ಪರಿಭಾವಿತ ಭೂ ಪರಿವರ್ತನೆಗೆ ಅನುಸರಿಸಬೇಕಾದ ಮಾರ್ಗಸೂಚಿ ಪ್ರಕಟಿಸಲಾಗಿದ್ದು, ಕೃಷಿ ಜಮೀನನ್ನು ಕೃಷಿಯೇತರ, ಕೈಗಾರಿಕಾ ಉದ್ದೇಶಕ್ಕಾಗಿ ಖರೀದಿಸಲು ಏನೇನು ಕ್ರಮ ಅನುಸರಿಸಬೇಕು ಎನ್ನುವ ಬಗ್ಗೆ ತಿಳಿಸಲಾಗಿದೆ.

ರಾಜ್ಯಮಟ್ಟದ ಏಕಗವಾಕ್ಷಿ ಒಪ್ಪಿಗೆ ಸಮಿತಿ/ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ಸಮಿತಿಗಳು ಅನುಮೋದಿಸಿದ ನಂತರವಷ್ಟೇ ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರ ಕಲಂ 63, 79ಎ, 79ಬಿ ಹಾಗೂ 80 ರಿಂದ ವಿನಾಯಿತಿ ಸಿಗಲಿದ್ದು, ಪ್ರಮುಖ ಮಾರ್ಗಸೂಚಿಗಳು ಇಂತಿವೆ.

- ಕೈಗಾರಿಕೋದ್ಯಮಿಗಳು ಇನ್ವೆಸ್ಟ್ ಮೆಮೊರಂಡಮ್‌ನಲ್ಲಿ ಭೂಮಿಗಾಗಿ ಕೋರಿಕೆ ಸಲ್ಲಿಸಲಾಗಿರುವ ಜಮೀನಿನ ದಾಖಲೆ/ವಿವರಗಳೊಂದಿಗೆ ಆನ್‌ಲೈನ್ ಮೂಲಕ (ಕೆಯುಎಂ ಪೋರ್ಟಲ್‌ನಿಂದ) ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ಜಮೀನುಗಳ ವಾಸ್ತವಾಂಶದ ಬಗ್ಗೆ ವರದಿ ಹಾಗೂ ನಿಯಮ ಅನುಸಾರ ಭೂ ಸುಧಾರಣಾ ಶುಲ್ಕ ನಿಗದಿಪಡಿಸಿ, ಕರ್ನಾಟಕ ಉದ್ಯೋಗ ಮಿತ್ರ ಮೂಲಕ ಕಳುಹಿಸಬೇಕು. 15 ದಿನಗಳೊಳಗೆ ಜಿಲ್ಲಾಧಿಕಾರಿಗಳು ಎಲ್ಲವನ್ನೂ ಪರಿಶೀಲಿಸಿ ವರದಿ ನೀಡಬೇಕು.
- ಎಸ್‌ಎಲ್‌ಎಸ್‌ಡಬ್ಲ್ಯೂಸಿಸಿ/ಎಸ್‌ಎಚ್‌ಎಲ್‌ಸಿಸಿ ಅನುಮೋದನೆ ಬಳಿಕ ಕೈಗಾರಿಕಾಭಿವೃದ್ಧಿ ಆಯುಕ್ತರು ಹೊರಡಿಸುವ ಆದೇಶ ಮಾತ್ರ ಅನ್ವಯ, ಭೂ ಸುಧಾರಣೆ ಕಾಯ್ದೆ 1961 ಕಲಂ 109ರಡಿ ನೀಡುವ ಆದೇಶವಾಗಿರುತ್ತದೆ. ಈ ಆದೇಶದ ಮೇಲೆ ನೋಂದಾಣಾಧಿಕಾರಿ ನೋಂದಣಿ ಮಾಡಬೇಕು.
- ಕಲಂ 109 ಮುಖಾಂತರ ಕ್ರಮಬದ್ಧವಾಗಿ ಅನುಮೋದನೆ ಮತ್ತು ನೋಂದಣಿಯಾದ ಜಮೀನು ಮಾತ್ರ ನಿಯಮಾನುಸಾರ ಕಂದಾಯ ಇಲಾಖೆಯಿಂದ ಭೂಮಿ ತಂತ್ರಾಂಶದಲ್ಲಿ ಆನ್‌ಲೈನ್ ಮೂಲಕ ಹಕ್ಕು ಬದಲಾವಣೆ ಮಾಡತಕ್ಕದ್ದು.
- ಹಕ್ಕು ಬದಲಾವಣೆ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಜಮೀನಿಗೆ ಸಂಬಂಧಿಸಿದಂತೆ ತಗಲುವ ಭೂ ಪರಿವರ್ತನಾ ಶುಲ್ಕ ಪಾವತಿಗೆ ಆನ್‌ಲೈನ್ ಪೇಮೆಂಟ್, ಡಿಡಿ ಮೂಲಕ ಜನರೇಟ್ ಮಾಡಬೇಕು. ಅದನ್ನು ಕೆಯುಎಂ ಪೋರ್ಟಲ್ ಮೂಲಕ ಶುಲ್ಕ ಪಾವತಿಸಬೇಕು.
- ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿಸಿದ ಬಳಿಕ ಡಿಜಿಟಲ್ ಸಹಿ ಮೂಲಕ ಭೂ ಪರಿವರ್ತನೆ ಆದೇಶ ಭೂಮಿ ಆನ್‌ಲೈನ್ ಪೋರ್ಟಲ್‌ನಲ್ಲಿ ಹೊರಡಿಸಬೇಕು. ಈ ಆದೇಶವನ್ನು ಕೆಯುಎಂ ಪೋರ್ಟಲ್‌ನಲ್ಲಿ ಪಡೆಯಲು ಇಂಟಿಗ್ರೇಷನ್ ಮಾಡಬೇಕು.
- ಮೇಲ್ಕಂಡ ಮಾರ್ಗಸೂಚಿಗಳನ್ವಯ ಭೂಮಿ ತಂತ್ರಾಂಶ, ಕಾವೇರಿ ತಂತಾಂಶ ಹಾಗೂ ಕರ್ನಾಟಕ ಉದ್ಯೋಗ ಮಿತ್ರ ತಂತ್ರಾಂಶದಲ್ಲಿ ಅಗತ್ಯ ಮಾರ್ಪಾಡು ಮಾಡಬೇಕು. ಭೂಮಿ ಹಕ್ಕು ಬದಲಾವಣೆ ಪ್ರಕ್ರಿಯೆ ಸಂದರ್ಭ ಈ 10 ನಿಯಮಗಳನ್ನು ಪಾಲಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಆಧಾರ:ವಿಜಯವಾಣಿ, ದಿನಾಂಕ:17.06.2020